# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **866 (982)** |
| **ಸದಸ್ಯರ ಹೆಸರು** | : | **ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು)** |
| **ಉತ್ತರಿಸಬೇಕಾದ ದಿನಾಂಕ** | : | **15.12.2025** |
| **ಉತ್ತರಿಸುವ ಸಚಿವರು** | : | **ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಉತ್ತರ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ಶಾಲೆಗಳಿಗೆ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶಾಲಾ ಕೊಠಡಿಗಳು, ಮೇಲ್ಛಾವಣಿ ಸೋರುವಿಕೆ, ಶೌಚಾಲಯದ ಕೊರತೆ ಮುಂತಾದ ಸಮಸ್ಯೆಗಳಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ಹೌದು ಸರ್ಕಾರದ ಗಮನಕ್ಕೆ ಬಂದಿದೆ, |

ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ಕಾರಿ ಶಾಲೆಗಳಲ್ಲಿನ ಕೊಠಡಿಗಳ ನಿರ್ಮಾಣ, ಕೊಠಡಿಗಳ ದುರಸ್ತಿ, ಶೌಚಾಲಯ ನಿರ್ಮಾಣ ಹಾಗೂ ಕುಡಿಯುವ ನೀರು ಹಾಗೂ ಶೌಚಾಲಯ ನಿರ್ವಹಣೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಅನುದಾನ ಮಂಜೂರಾಗಿರುತ್ತದೆ.

**ಕೊಠಡಿಗಳ ನಿರ್ಮಾಣ**:

- 2022-23 ರಿಂದ 2024-25ನೇ ಸಾಲಿನವರೆಗೆ ಹಂತಹಂತವಾಗಿ ರಾಜ್ಯ ವಲಯ ವಿವೇಕ ಯೋಜನೆಯಡಿ ಕೊಠಡಿ ನಿರ್ಮಾಣಕ್ಕೆ ಅನುದಾನ ಮಂಜೂರಾಗಿರುತ್ತದೆ. ಕಾಮಗಾರಿ ಮುಕ್ತಾಯಗೊಂಡಿರುತ್ತದೆ.

ರೂ.ಲಕ್ಷಗಳಲ್ಲಿ

| ಕ್ರ.ಸಂ | ತಾಲ್ಲೂಕಿನ ಹೆಸರು | ಶಾಲೆಗಳ ಸಂಖ್ಯೆ | ಕೊಠಡಿಗಳ ಸಂಖ್ಯೆ | ಮಂಜೂರಾದ ಅನುದಾನ | ಬಿಡುಗಡೆಯಾದ ಅನುದಾನ |
|---|---|---|---|---|---|
| 01 | ಕಾರವಾರ | 21 | 27 | 375.3 | 371.30 |
| 02 | ಅಂಕೋಲ | 18 | 25 | 347.5 | 343.50 |
| 03 | ಕುಮಟಾ | 26 | 27 | 377.8 | 373.20 |
| 04 | ಹೊನ್ನಾವರ | 26 | 31 | 435.9 | 431.30 |
| 05 | ಭಟ್ಕಳ | 14 | 17 | 236.3 | 232.11 |
| | ಒಟ್ಟು | **105** | **127** | **1772.80** | **1751.41** |

- 2024-25ನೇ ಸಾಲಿಗೆ ರಾಜ್ಯವಲಯ ಮುಂದುವರೆದ ಯೋಜನೆಯಡಿ ಭಟ್ಕಳ ತಾಲ್ಲೂಕಿನ 1 ಸರ್ಕಾರಿ ಶಾಲೆಯ ಕೊಠಡಿಗೆ ರೂ.14.50ಲಕ್ಷಗಳು ಬಿಡುಗಡೆಗೊಂಡಿರುತ್ತದೆ.

- 2024-25ನೇ ಸಾಲಿಗೆ ಕೊಠಡಿಗಳ ದುರಸ್ತಿ ಕಾಮಗಾರಿಗೆ ಮಂಜೂರಾದ ಅನುದಾನದ ವಿವರ:

ರೂ.ಲಕ್ಷಗಳಲ್ಲಿ

| ಕ್ರ.ಸಂ | ತಾಲ್ಲೂಕಿನ ಹೆಸರು | ಶಾಲೆಗಳ ಸಂಖ್ಯೆ | ಕೊಠಡಿಗಳ ಸಂಖ್ಯೆ | ಮಂಜೂರಾದ ಅನುದಾನ | ಬಿಡುಗಡೆಯಾದ ಅನುದಾನ |
|---|---|---|---|---|---|
| 01 | ಕಾರವಾರ | 27 | 53 | 42.13 | 42.13 |
| 02 | ಅಂಕೋಲ | 30 | 51 | 47.32 | 47.32 |
| 03 | ಕುಮಟಾ | 66 | 83 | 105.11 | 105.11 |
| 04 | ಹೊನ್ನಾವರ | 50 | 89 | 75.88 | 73.88 |
| 05 | ಭಟ್ಕಳ | 16 | 25 | 40.38 | 40.38 |
| | ಒಟ್ಟು | 189 | 301 | 310.82 | 308.82 |

- 2024-25ನೇ ಸಾಲಿಗೆ SDRF ಕೊಠಡಿಗಳ ದುರಸ್ತಿ ಕಾಮಗಾರಿಗೆ ಮಂಜೂರಾದ ಅನುದಾನದ ವಿವರ:

ರೂ.ಲಕ್ಷಗಳಲ್ಲಿ

| ಕ್ರ.ಸಂ | ತಾಲ್ಲೂಕಿನ ಹೆಸರು | ಶಾಲೆಗಳ ಸಂಖ್ಯೆ | ಕೊಠಡಿಗಳ ಸಂಖ್ಯೆ | ಮಂಜೂರಾದ ಅನುದಾನ | ಬಿಡುಗಡೆಯಾದ ಅನುದಾನ |
|---|---|---|---|---|---|
| 01 | ಕಾರವಾರ | 4 | 4 | 8.00 | 8.00 |
| 02 | ಅಂಕೋಲ | 3 | 3 | 6.00 | 6.00 |
| 03 | ಕುಮಟಾ | 6 | 6 | 11.30 | 11.30 |
| 04 | ಹೊನ್ನಾವರ | 11 | 11 | 21.50 | 21.50 |
| 05 | ಭಟ್ಕಳ | 11 | 11 | 22.00 | 21.50 |
| | ಒಟ್ಟು | **35** | **35** | **68.8** | **68.3** |

- 2022-23 ರಿಂದ 2024-25ನೇ ಸಾಲಿನವರೆಗೆ ಹಂತ ಹಂತವಾಗಿ ನರೇಗಾ ಯೋಜನೆ ಒಗ್ಗೂಡಿಸುವಿಕೆ ಯೋಜನೆಯಡಿ ಶೌಚಾಲಯ ನಿರ್ಮಾಣಕ್ಕೆ ಮಂಜೂರಾದಅನುದಾನದ ವಿವರ

ರೂ.ಲಕ್ಷಗಳಲ್ಲಿ

| ಕ್ರ.ಸಂ | ತಾಲ್ಲೂಕಿನ ಹೆಸರು | ಶೌಚಾಲಯಗಳ ಸಂಖ್ಯೆ | ಮಂಜೂರಾದ ಅನುದಾನ | ಬಿಡುಗಡೆಯಾದ ಅನುದಾನ |
|---|---|---|---|---|
| 01 | ಕಾರವಾರ | 11 | 44.95 | 44.95 |
| 02 | ಅಂಕೋಲ | 21 | 92.40 | 92.40 |
| 03 | ಕುಮಟಾ | 28 | 102.55 | 102.55 |
| 04 | ಹೊನ್ನಾವರ | 13 | 52.50 | 52.50 |
| 05 | ಭಟ್ಕಳ | 10 | 45.50 | 45.50 |
| | ಒಟ್ಟು | **83** | **337.90** | **337.90** |

- 2024-25ನೇ ಸಾಲಿಗೆ ಕುಡಿಯುವ ನೀರು ಮತ್ತು ಶೌಚಾಲಯ ನಿರ್ವಹಣೆಗೆ ಮಂಜೂರಾದ ಅನುದಾನ

ರೂ.ಲಕ್ಷಗಳಲ್ಲಿ

| ಕ್ರ.ಸಂ | ತಾಲ್ಲೂಕಿನ ಹೆಸರು | ಶಾಲೆಗಳ ಸಂಖ್ಯೆ | ಮಂಜೂರಾದ ಅನುದಾನ | ಬಿಡುಗಡೆಯಾದ ಅನುದಾನ |
|---|---|---|---|---|
| 01 | ಕಾರವಾರ | 121 | 13.75241 | 13.75241 |
| 02 | ಅಂಕೋಲ | 111 | 17.92588 | 17.92588 |
| 03 | ಕುಮಟಾ | 141 | 23.27086 | 23.27086 |
| 04 | ಹೊನ್ನಾವರ | 199 | 28.49117 | 28.49117 |
| 05 | ಭಟ್ಕಳ | 117 | 20.56596 | 20.56596 |
| | ಒಟ್ಟು | **689** | **104.00628** | **104.00628** |

ಸಮಗ್ರ ಶಿಕ್ಷಣ ಕರ್ನಾಟಕದಡಿ ಮಂಜೂರಾದ ಅನುದಾನದ ವಿವರ

- ಪಿ.ಎಂ.ಶ್ರೀ ಯೋಜನೆಯಲ್ಲಿ 2023-24ರ ಸಾಲಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿನ 02 ಶಾಲೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ರೂ.4.00ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು ಕಾಮಗಾರಿ ಮುಕ್ತಾಯಗೊಂಡು ಉಪಯೋಗಿಸಲ್ಪಡುತ್ತಿದೆ.

| | | |
|---|---|---|
| | | • 2024-25ರ ಸಾಲಿನಲ್ಲಿ 06 ಕೊಠಡಿಗಳ ನಿರ್ಮಾಣಕ್ಕಾಗಿ ರೂ.117.40ಲಕ್ಷಗಳ ಅನುದಾನ ಮಂಜೂರಾಗಿದ್ದು, ರೂ.88.06ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ.<br>• ಕೇಂದ್ರ ಪುರಸ್ಕೃತ ಯೋಜನೆಯಡಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳ ಹಾಜರಾತಿಗೆ ಅನುಗುಣವಾಗಿ ಹಾಗೂ ಅವಶ್ಯವಿರುವ ಕೊಠಡಿಗಳ ಬಗ್ಗೆ ಸಂಬಂಧಪಟ್ಟ ಜಿಲ್ಲೆಗಳಿಂದ ಬರುವ ಪ್ರಸ್ತಾವನೆಗಳನ್ನು ಆಧರಿಸಿ ಮಂಜೂರಾದ/ಅನುಮೋದನೆಯಾದ ಕಾಮಗಾರಿಗಳಿಗೆ ಆಯಾ ಸಾಲಿನಲ್ಲಿ ಬಿಡುಗಡೆ ಆಗುವ ಅನುದಾನಕ್ಕೆ ಅನುಗುಣವಾಗಿ ಕೊಠಡಿಗಳನ್ನು ನಿರ್ಮಿಸಿ ಕೊರತೆಗಳನ್ನು ನೀಗಿಸಲು ಕ್ರಮವಹಿಸಲಾಗಿದೆ. |
| ಆ | ಮಲೆನಾಡು ಜಿಲ್ಲೆಗಳಲ್ಲಿ ನಿರಂತರ ಮಳೆಯಿಂದ ಜಿಲ್ಲೆಯ ಆನೇಕ ಶಾಲೆಗಳ ಮೇಲ್ಛಾವಣಿ ಸೋರುವಿಕೆ ದುರಸ್ಥಿ ಆಗಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಶಾಲೆಗಳ ಮೇಲ್ಛಾವಣಿ ದುರಸ್ಥಿಕಾರ್ಯ ಮಾಡುವುದಕ್ಕಾಗಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು? | • 2025-26ನೇ ಸಾಲಿಗೆ SDRF ಯೋಜನೆಯಡಿ ಉತ್ತರ ಕನ್ನಡ ಜಿಲ್ಲೆಯ ಒಟ್ಟು 169 ಸರ್ಕಾರಿ ಶಾಲೆಗಳ 169 ಕೊಠಡಿಗಳ ಮೇಲ್ಛಾವಣಿ ದುರಸ್ತಿ ಹಾಗೂ ಇತರೆ ದುರಸ್ತಿ ಕಾಮಗಾರಿ ಸೇರಿದಂತೆ ರೂ.292.47ಲಕ್ಷಗಳಿಗೆ ಶಾಲಾಪಟ್ಟಿ ಸಿದ್ಧಪಡಿಸಿ ಉಪನಿರ್ದೇಶಕರು(ಆಡಳಿತ) ಉತ್ತರ ಕನ್ನಡ ಜಿಲ್ಲೆ ರವರು, ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಜಿಲ್ಲೆ ರವರಿಗೆ ಅನುದಾನ ಬಿಡುಗಡೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.<br>• 2025-26ನೇ ಸಾಲಿಗೆ ರಾಜ್ಯ ವಲಯ ಮುಂದು ವರೆದ ಯೋಜನೆಯಡಿ ಸರ್ಕಾರಿ ಶಾಲಾ ಕೊಠಡಿಗಳ ನಿರ್ಮಾಣಕ್ಕಾಗಿ ರೂ.36000.00 ಲಕ್ಷಗಳು, ಸರ್ಕಾರಿ ಶಾಲೆಗಳಲ್ಲಿನ ಕೊಠಡಿಗಳ ದುರಸ್ತಿ ಕಾಮಗಾರಿಗೆ ರೂ. 10000.00ಲಕ್ಷಗಳು ಹಾಗೂ ಶೌಚಾಲಯ ನಿರ್ಮಾಣಕ್ಕಾಗಿರೂ. 9000.00 ಲಕ್ಷಗಳ ಅನುದಾನ ಮತ್ತು ಸಮಗ್ರ ಶಿಕ್ಷಣ-ಕರ್ನಾಟಕ ಯೋಜನೆಯಡಿ 2025-26ನೇ ಸಾಲಿನಲ್ಲಿ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ರೂ.4359.00 ಲಕ್ಷಗಳು ಮತ್ತು ರಿಪೇರಿಗಾಗಿ ರೂ. 2816.3 ಲಕ್ಷಗಳ ಅನುದಾನ ನಿಗದಿಯಾಗಿದ್ದು, ಅಗತ್ಯತೆ ಮತ್ತು ಆದ್ಯತೆಯನುಸಾರ ಕ್ರಿಯಾ ಯೋಜನೆ ಸಿದ್ಧಪಡಿಸಿದ್ದು ಅನುಮೋದನೆಗೊಳ್ಳುವ ಪ್ರಕ್ರಿಯೆಯಲ್ಲಿದೆ<br><br>ಅನುದಾನದ ಲಭ್ಯತೆಯನ್ನಾಧರಿಸಿ ಹಂತ ಹಂತವಾಗಿ ಶಾಲಾ ಕೊಠಡಿಗಳು, ಶೌಚಾಲಯಗಳ ದುರಸ್ಥಿ ಕಾರ್ಯವನ್ನು ಹಾಗೂ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. |

**ಇಪಿ 405 ಯೋಸಕ 2025**

(ಎಸ್.ಮಧುಬಂಗಾರಪ್ಪ)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**